ನಡೆಯುತ್ತಿದ್ದ ಈ ಜಾತ್ರೆಯಲ್ಲಿ ಪ್ರತಿ ದಿನ ಸಾಯಂಕಾಲ ಊರಿನ ಶಾಲಾ ಮಕ್ಕಳು ಮನರಂಜನೆ ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ನಾನು ಮತ್ತು ನನ್ನ ಸ್ನೇಹಿತೆ ಮಾಡಿದ್ದ ನಾಟಕದಲ್ಲಿ ಆಕೆ(ಹಾಲು ಮಾರುವವಳು) ನಾನು(ಗೃಹಿಣಿ) ಹಿಡಿದಿದ್ದ ಪಾತ್ರೆಗೆ ಹಾಲು ಹಾಕುವ ದೃಶ್ಯವಿತ್ತು. ನೀರಿಗೆ ಟಾಲ್ಕಂ ಪೌಡರ್ ಹಾಕಿ ಹಾಲಿನಂತೆ ಮಾಡಿದ್ದೆವು. ಆದರೆ ದೂರದಿಂದ ನೋಡಿದವರಿಗೆ ಅದು ನೀರಿನಂತೆ ಕಂಡಿತ್ತು! ಹಾಲಿನ ಬದಲು ನೀರು ಹಾಕಿದ್ದೆಂದು ಎಲ್ಲರೂ ತಮಾಷೆ ಮಾಡಿದ್ದರು. ಜಾತ್ರೆಯ ದಿನಗಳಲ್ಲಿ ದೊಂಬರಾಟ, ತಿರುಗುವ ತೊಟ್ಟಿಲು ಇತ್ಯಾದಿ ಮನರಂಜನೆಗಳು ಜೋರಾಗಿರುತ್ತಿದ್ದವು. ಜಾತ್ರೆಯ ಕೊನೆಯ ದಿನ ಆರೋಗ್ಯವಂತ, ಸುಂದರವಾದ ಜಾನುವಾರುಗಳಿಗೆ ಬಹುಮಾನ ಘೋಷಣೆ ಮಾಡುತ್ತಿದ್ದರು. ಊರ ಕಡೆ ಈಗ ಕೃಷಿ ಪದ್ಧತಿ ಬದಲಾಗಿದೆ. ಮನೆಗಳಲ್ಲಿ ಜಾನುವಾರು ಸಾಕುವುದು ಹೊರೆ ಮತ್ತು ದುಬಾರಿ ಎನಿಸತೊಡಗಿದೆ. ಜನ – ಜಾನುವಾರುಗಳ ನಡುವೆ ನಂಟು ಕಡಿಮೆಯಾಗಿ, ಕೊಟ್ಟಿಗೆಗಳು ಖಾಲಿ ಖಾಲಿ ಎನಿಸುವಂತಾಗಿದೆ. ಕೃಷಿ ಮತ್ತು ಕೊಟ್ಟಿಗೆ ಕೆಲಸಗಳಿಗೆ ಆಳುಗಳು ಸಿಗುವುದೂ ಕಷ್ಟವಾಗಿದೆ. ಕೃಷಿಯ ಯಂತ್ರಗಳು, ಸಿದ್ಧಪಡಿಸಿದ ಗೊಬ್ಬರ, ಪಾಶ್ಚರೀಕರಿಸಿದ ಹಾಲು ಇವೆಲ್ಲಾ ದೊರೆಯುವಾಗ ಜಾನುವಾರುಗಳನ್ನು ಸಾಕುವ ಕಷ್ಟ ಯಾಕೆ ಬೇಕು ಎನ್ನುವವರೇ ಹೆಚ್ಚು. ಈಗ ಊರಲ್ಲಿ ಇರುವವರೂ ಬರುವವರೂ ಸೇರಿದಂತೆ ಜನಸಂಖ್ಯೆ ಮಾತ್ರ ಹೆಚ್ಚಾಗಿದೆ. ಈ ಜನಜಾತ್ರೆಯ ನಡುವೆ ಜಾನುವಾರುಗಳೂ ಇಲ್ಲ, ಜಾನುವಾರು ಜಾತ್ರೆಯೂ ಇಲ್ಲ.

ವರ್ಷಕ್ಕೊಂದು ಬಾರಿಯಾದರೂ ಸರ್ಕಸ್ ಕಂಪೆನಿಯವರು ಬಂದು ಹೊಳೆಗೋಣೆಯಲ್ಲಿ ಟೆಂಟ್ ಹಾಕುವುದಿತ್ತು. ಮೈ ನವಿರೇಳಿಸುವ ಅವರ ಸರ್ಕಸ್ ನೋಡಲು ಅಕ್ಕಪಕ್ಕದ ಊರುಗಳಿಂದ ಜನ ಬರುತ್ತಿದ್ದರು. ಊರಿನಲ್ಲೆಲ್ಲ ಅದನ್ನು ಕುರಿತು ಡಂಗುರ ಸಾರುತ್ತಿದ್ದರು. ನಮ್ಮನ್ನು ಬೆಚ್ಚಿ ಬೀಳಿಸುತ್ತಿದ್ದ ವಿಷಯವೆಂದರೆ 'ಡೆತ್ ವೆಲ್'. ಮೇಲೆ ಅಗಲವಾಗಿದ್ದು ತಳಕ್ಕೆ ಹೋಗುತ್ತಾ ಕಿರಿದಾಗುವ, ವಿಶಾಲವಾದ ಕೋನ್ ಅನ್ನು ಹೋಲುವಂತಿದ್ದ ಈ ಬಾವಿಯನ್ನು ನೆಲದೊಳಗೆ ಹಲವು ಅಡಿಗಳಷ್ಟು ಆಳದವರೆಗೆ ಮಣ್ಣು ತೆಗೆದು, ಸುತ್ತಲೂ ಮರದ ಹಲಗೆಗಳನ್ನು ಜೋಡಿಸಿ ಮಾಡಿರುತ್ತಿದ್ದರು. ಜನರಿಗೆ ನೋಡಲೆಂದು ಮೇಲ್ಗಡೆ ಸುತ್ತಲೂ ಕಟಕಟೆ(ರೈಲಿಂಗ್) ಹಾಕಿರುತ್ತಿದ್ದರು. ಬೈಕ್ ಸವಾರನೊಬ್ಬ ವೇಗವಾಗಿ ಬಾವಿಯ ಮೇಲ್ಭಾಗದಿಂದ ಹಲಗೆಯ ಮೇಲೆ ಇಳಿದು, 'ರೊಂಯ್ ರೊಂಯ್', 'ಕೊಟ್ ಕೊಟ್' ಎಂದು ವೇಗವಾಗಿ ಬೈಕನ್ನು ಹಲಗೆಯ ಮೇಲೆ ಸುತ್ತು ಸುತ್ತಿಸುತ್ತಾ ಬಾವಿಯ ಕೆಳಗೆ ಇಳಿಯುತ್ತಿದ್ದ. ಕೆಲವೊಮ್ಮೆ ಇಬ್ಬರು ಬೈಕ್ ಸವಾರರಿರುತ್ತಿದ್ದರು. ಅವರು ಒಬ್ಬರಿಗೊಬ್ಬರು ಡಿಕ್ಕಿ ಹೊಡೆದರೆ ಎಂದು ನಮಗೆ ಭಯವಾಗುತ್ತಿತ್ತು. ಆಯ ತಪ್ಪಿದರೆ ಬೈಕ್ ಸವಾರ ನೇರ ಮೃತ್ಯುವಿನ ಬಾಯಿಗೆ ಹೋಗುವಂತಿತ್ತು ಈ ಡೆತ್ ವೆಲ್! ಜೀವನೋಪಾಯಕ್ಕಾಗಿ ಜೀವಭಯವನ್ನು ತೊರೆದು ಮೃತ್ಯುಕೂಪದೊಳಗೆ ಸುತ್ತುವ ಆ ಬೈಕ್ ಸವಾರರು ಹೀರೋಗಳಂತೆಯೇ ಕಂಡಿದ್ದರು. ಮತ್ತೊಮ್ಮೆ ಬಂದಿದ್ದವರೆಂದರೆ ದಿನವಿಡೀ ಸೈಕಲ್ ಮೇಲೆಯೇ ಕುಳಿತು ಅದರಲ್ಲೇ ಒಂದು ದೊಡ್ಡ ವೃತ್ತದೊಳಗೆ ತಿರುಗುತ್ತಾ ಕಾಲ ಕಳೆಯುವವರು. ಅವರು ಸೈಕಲ್ ಮೇಲಿಂದ ಕೆಳಗೆ ಇಳಿಯುತ್ತಲೇ ಇರಲಿಲ್ಲ. ಹಲ್ಲುಜ್ಜುವುದು, ಊಟ – ಕಾಫಿ – ತಿಂಡಿ ಇವೆಲ್ಲಾ ಸೈಕಲ್ ಮೇಲೆಯೇ. ಒಂದು, ಎರಡು ಮಾಡಲು ಏನು ಮಾಡುತ್ತಾರೆ ಎಂದು ಜನ ಪಿಸಿಪಿಸಿ ಮಾತನಾಡುತ್ತಿದ್ದರು. ದಿನವಿಡೀ ಸೈಕಲ್ ಪೆಡಲ್ ತುಳಿಯುತ್ತ ಅದನ್ನು ಓಡಿಸುತ್ತಲೇ ಇರುತ್ತಿದ್ದ ಆ ವ್ಯಕ್ತಿ ರಾತ್ರಿ ಏನು ಮಾಡುತ್ತಿದ್ದರು ಎಂದು ಯಾರಿಗೂ ಗೊತ್ತಿರಲಿಲ್ಲ. ಈಗಾದರೆ